

ನಾಗೇಶ ಹೆಗಡೆ

# ಕಣಗಿಲೆ

ಹುಟ್ಟಿದಾಗಲೇ ಹಣೆಗೆ ಅಂಟಿದ್ದ
ಗುರುತುಪತ್ರವೀಗ ಕಳೆದುಹೋಗಿದೆ
ಅದರೊಂದಿಗೇ ನೇಯ್ದ ಅಳುವಿನ ನಿಶಾನೆಯೂ
ಅಲಾಯದವಾಗಿ ನನ್ನ ಗುರುತು ನನಗೇ ಮರೆತಿದೆ
ಹೊಟ್ಟೆಯೊಳಗೆ ಸೂರ್ಯನ ಮುಚ್ಚಿಟ್ಟುಕೊಂಡು
ಕತ್ತಲ ನಕ್ಷತ್ರಗಳಿಗೆ ಇಷ್ಟಿಷ್ಟೇ ಬೆಳಕು ಉಣಿಸಿದೆ
ಚಂದ್ರಮನನು ಎತ್ತಿ ತಂದು ಮೊಲೆಕುಡಿಸಿ
ರಾತ್ರಿಯಿಡೀ ದಣಿವಿಲ್ಲದೆ ಚುಕ್ಕು ಬಡಿದೆ

ನನ್ನೊಳಗೀಗ ಬೆಂಕಿಯ ಬಿಸಿಯಿದೆ, ಬೆಳದಿಂಗಳ ಕಂಪೂ
ಹರಿವ ನದಿಯ ಕಲರವವಿದೆ, ಹಕ್ಕಿಗಾನವಿದೆ ಮರುಭೂಮಿಯೂ
ಗುರುತುಪತ್ರವನು ಕಳೆದ ದೇವರೇ
ನನ್ನ ಆಯಸ್ಸು ನಿನ್ನ ಪಾದಗಳಿಗಿಡುವೆ
ರೆಕ್ಕೆಯಿಲ್ಲದ ಹಕ್ಕಿಗೆ ಹಾರುವ ಕನಸ ಕೊಟ್ಟದ್ದಕ್ಕೆ
ನನ್ನ ಗುರುತೀಗ ಕಾಲಡಿಯ ಬರಿಮಣ್ಣು
ತುಳಿದಷ್ಟೂ ಹದಗೊಳುವ, ಹನಿಮಳೆಗೆ ಅರಳುವ
ಜೀವ ಕುಡಿಮಾಡಿ ಬೀಜ ಕಾಪಿಡುವ ಬರಿಮಣ್ಣು
ಇರುವಂತೆ ಇರದಿರುವಂತಿರುವ ಮಣ್ಣು
ದೇವರೇ, ಮಣ್ಣ ದಣಿವಿಗೆ ಜೇನುದನಿಯ ನೇವರಿಕೆ ಕೊಡು
ಗುರುತುಳಿಯದಂತೆ ಕಣಕಣವ ಕತ್ತರಿಸು
ಊರು, ಕಣಗಿಲೆಯಾಗಿ ಹೂ ಗಲಗಲಿಸುವಂತೆ

● ವಿನಯಾ